ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪, ೨೨೪೨೩೮೬೬, ೨೬೬೭೨೯೯೨
ಸ್ಥಾಪನೆ : ೧೯೧೫
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ/ಪ.ಪ್ರಕಟಣೆ/೨೦೨೩-೨೪ ದಿನಾಂಕ : ೧೧-೦೬-೨೦೨೩

**ಬೆಂಗಳೂರಿನ ಮಾನ್ಯ CCH 18, XIX ಹೆಚ್ಚುವರಿ ಸಿವಿಲ್ ಹಾಗೂ ಸತ್ರ ನ್ಯಾಯಾಲಯ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅದರ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರ ವಿರುದ್ಧ, ಸಾರ್ವಜನಿಕ ದೃಷ್ಟಿಯಲ್ಲಿ ಹಾನಿಮಾಡುವ ಮಾನಹಾನಿಕರ ಹೇಳಿಕೆ ವಿರುದ್ಧ ಮಧ್ಯಕಾಲಿಕ ಪ್ರತಿಬಂಧಕ ಆಜ್ಞೆ ಹೊರಡಿಸಿರುವ ಕುರಿತು.**

---

೧. ಬೆಂಗಳೂರಿನ ಮಾನ್ಯ CCH 18, XIX ಹೆಚ್ಚುವರಿ ಸಿವಿಲ್ ಹಾಗೂ ಸತ್ರ ನ್ಯಾಯಾಲಯದಲ್ಲಿ **ಕನ್ನಡ ಸಾಹಿತ್ಯ ಪರಿಷತ್ತು** ಹಾಗೂ **ನಾಡೋಜ ಡಾ. ಮಹೇಶ ಜೋಶಿ**, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಹೂಡಿದ **OS 3562/2023** ದಾವೆಯಲ್ಲಿ ಪ್ರತಿವಾದಿಗಳಾಗಿರುವ (೧)**'ಸಮಾನ ಮನಸ್ಕರ ವೇದಿಕೆ, ಬೆಂಗಳೂರು'**, (೨)**ಕನ್ನಡ ಜನಶಕ್ತಿ ಕೇಂದ್ರ, ಬೆಂಗಳೂರು**, (೩)**ಕನ್ನಡ ಸಂಘರ್ಷ ಸಮಿತಿ, ಬೆಂಗಳೂರು** – ಈ ಮೂರು ಸಂಸ್ಥೆಗಳು ಹಾಗೂ ಈ ಕೆಳಕಾಣಿಸಿದ ಹತ್ತು ವ್ಯಕ್ತಿಗಳಾಗಿರುವ ಸಮಾನ ಮನಸ್ಕರ ವೇದಿಕೆಯ ಸಂಚಾಲಕ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ೨೦೨೧ರ ಅಧ್ಯಕ್ಷರ ಚುನಾವಣೆಯಲ್ಲಿ ಹೀನಾಯವಾಗಿ ಸೋತು ಠೇವಣಿಯನ್ನು ಕಳೆದುಕೊಂಡ (೧)**ಸಿ.ಕೆ. ರಾಮೇಗೌಡ**, ಕನ್ನಡ ಸಾಹಿತ್ಯ ಪರಿಷತ್ತಿನ ೨೦೨೧ರ ಅಧ್ಯಕ್ಷರ ಚುನಾವಣೆಯಲ್ಲಿ ಹೀನಾಯವಾಗಿ ಸೋತು ಠೇವಣಿಯನ್ನು ಕಳೆದುಕೊಂಡ (೨)**ಶೇಖರಗೌಡ ಮಾಲಿ ಪಾಟೀಲ**, ಸಮಾನ ಮನಸ್ಕರ ವೇದಿಕೆಯಡಿಯಲ್ಲಿ ಸಾಮಾಜಿಕ ಹೋರಾಟಗಾರನೆಂದು ಗುರುತಿಸಿಕೊಂಡಿರುವ (೩)**ಎನ್. ಹನುಮೇಗೌಡ**, ಸಮಾನ ಮನಸ್ಕರ ವೇದಿಕೆಯ ಸಂಚಾಲಕ (೪)**ಶಂಕರ್ ಹೂಗಾರ್**, ಸಮಾನ ಮನಸ್ಕರ ವೇದಿಕೆಯಲ್ಲಿ ಗುರುತಿಸಿಕೊಂಡಿರುವ (೫)**ಆರ್.ಜಿ. ಹಳ್ಳಿ ನಾಗರಾಜ**, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಜವಾಬ್ದಾರಿಯಲ್ಲಿದ್ದುಕೊಂಡು, ಕನ್ನಡ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ (೬)**ಎಂ. ಪ್ರಕಾಶಮೂರ್ತಿ**, ಬೆಂಗಳೂರು ನಗರ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಜವಾಬ್ದಾರಿಯಲ್ಲಿದ್ದುಕೊಂಡು, ಕನ್ನಡ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ (೭)**ಎಲ್. ಹರ್ಷ**, ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ಜವಾಬ್ದಾರಿಯಲ್ಲಿ ಇದ್ದುಕೊಂಡು, ಕನ್ನಡ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ (೮)**ಡಿ. ಮಂಜುನಾಥ್**, ಕನ್ನಡ ಸಂಘರ್ಷ ಸಮಿತಿಯ ಸಲಹೆಗಾರ ಹಾಗೂ ಸಮಾನ ಮನಸ್ಕರ ವೇದಿಕೆಯೊಂದಿಗೆ ಸಕ್ರಿಯವಾಗಿ ಗುರುತಿಸಿಕೊಂಡಿರುವ (೯)**ರಾಮಣ್ಣ ಕೋಡಿಹೊಸಳ್ಳಿ**, ಸಮಾನ

೨ನೇ ಪುಟಕ್ಕೆ....

ಮನಸ್ಕರ ವೇದಿಕೆಯಲ್ಲಿ ಗುರುತಿಸಿಕೊಂಡಿರುವ (೧೦)ಕೊ.ನಾ. ನಾಗರಾಜ – ಒಟ್ಟು ಹದಿಮೂರು ಪ್ರತಿವಾದಿಗಳು ಮತ್ತು ಈ ಪ್ರತಿವಾದಿಗಳ ಪ್ರತಿನಿಧಿಗಳು, ನಿರೂಪಕರು, ಸುದ್ದಿಗಳ ಓದುಗರು, ವರದಿಗಾರರು, ಪ್ರತಿನಿಧಿಗಳು, ಅನುಯಾಯಿಗಳು, ಸಹವರ್ತಿಗಳು, ಅವರ ಸಂಘದ ಸದಸ್ಯರ ಅಥವಾ ಇನ್ನಾರೇ ಮೂಲಕ ಅಥವಾ ಅಧೀನದಲ್ಲಿ ಪ್ರಸರಿಸುವ, ಬಿತ್ತರಿಸುವ, ಮುದ್ರಿಸುವ, ದುರ್ಬಲಗೊಳಿಸುವ, ಒಲವು ತೋರುವ, ಕಡೆಗಣಿಸುವ ಅಥವಾ ಗೌರವ, ಘನತೆ, ಗಾಂಭೀರ್ಯ, ಪ್ರಸಿದ್ಧಿ, ಸಧ್ಭಾವನೆ, ಪೂಜ್ಯತೆ, ಯುಕ್ತ ಮತ್ತು ಖ್ಯಾತಿಯ ಹೆಸರಿಗೆ, ಅದರ ಸದಸ್ಯರ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರ ದೃಷ್ಟಿಯಲ್ಲಿ ಆಗುವ ಹಾನಿಮಾಡುವ ಮಾನಹಾನಿಕರ ಹೇಳಿಕೆಗಳನ್ನು, ೧ನೇ ವಾದಿ – ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತದಲ್ಲಿ ಅಥವಾ ಒಂದು (ಕನ್ನಡ ಸಾಹಿತ್ಯ ಪರಿಷತ್ತು) ಮತ್ತು ಎರಡನೇ ವಾದಿ(ನಾಡೋಜ ಡಾ. ಮಹೇಶ ಜೋಶಿ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು)ಗಳ ವಿರುದ್ಧ ಯಾವುದೇ ಸುದ್ದಿಗಳನ್ನು ಮುಂದಿನ ಸುನಾವಣಾ ತಾರೀಖಿನವರೆವಿಗೆ, ಮಾಡದಂತೆ ನಿರ್ಬಂಧಿಸಿ ಮಧ್ಯ-ಕಾಲೀನ ಏಕಪಕ್ಷೀಯ ನಿರ್ಬಂಧಕಾಜ್ಞೆಯ ಆದೇಶವನ್ನು ಮಾನ್ಯ ನ್ಯಾಯಾಲಯವು ದಿನಾಂಕ ೯-೦೬-೨೦೨೫ರಂದು ಹೊರಡಿಸಿದೆ.

೨. ನ್ಯಾಯಾಲಯದ ಈ ಮಾಹಿತಿಯನ್ನು ಎಲ್ಲರ ಗಮನಕ್ಕೆ ತರುತ್ತಾ, 'ಸಮಾನ ಮನಸ್ಕರ ವೇದಿಕೆ, ಬೆಂಗಳೂರು' ವತಿಯಿಂದ ಸೋಮವಾರ ದಿನಾಂಕ ೧೨-೦೬-೨೦೨೫ ರಂದು ಬೆಳಗ್ಗೆ ೧೧.೦೦ ಗಂಟೆಗೆ ಸ್ವಾತಂತ್ರ್ಯ ಉದ್ಯಾನವನ, ಬೆಂಗಳೂರು(ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿ ಮುಂಭಾಗದಲ್ಲಿ ಪೋಲೀಸರು ಅನುಮತಿ ನಿರಾಕರಿಸಿರುವ ಹಿನ್ನೆಲೆಯಲ್ಲಿ) ಇಲ್ಲಿ ಆಯೋಜಿಸಿರುವ ಪ್ರತಿಭಟನೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧ ಹಾಗೂ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರ ವಿರುದ್ಧ ಮಾತನಾಡಿ, ಅವರ ಗೌರವ, ಘನತೆ, ಗಾಂಭೀರ್ಯ, ಪ್ರಸಿದ್ಧಿ, ಸಧ್ಭಾವನೆ, ಪೂಜ್ಯತೆ, ಯುಕ್ತ ಮತ್ತು ಖ್ಯಾತಿಯ ಹೆಸರಿಗೆ ಹಾಗೂ ಸಾರ್ವಜನಿಕರ ದೃಷ್ಟಿಯಲ್ಲಿ ಹಾನಿಮಾಡುವ ಮಾನಹಾನಿಕರ ಹೇಳಿಕೆಗಳನ್ನು ತಿಳಿದು, ತಿಳಿದು ದುರುದ್ದೇಶಪೂರ್ವಕವಾಗಿ ಮಾಡಿದ್ದಲ್ಲಿ, ಅಂತಹ ಮಾತುಗಳನ್ನು ಆಡಿದವರು ಸ್ಪಷ್ಟವಾಗಿ ನ್ಯಾಯಾಂಗ ನಿಂದನೆಗೆ ಒಳಪಡುತ್ತಾರೆ ಎಂಬ ಎಚ್ಚರಿಕೆಯನ್ನು ತಮಗೆ ತಿಳಿಸಬಯಸುತ್ತೇವೆ. ಸಮಾನ ಮನಸ್ಕರ ವೇದಿಕೆಯ ಸಂಚಾಲಕರಾದ ಸಿ.ಕೆ. ರಾಮೇಗೌಡ ಹಾಗೂ ಶಂಕರ ಹೂಗಾರರ ಗಮನಕ್ಕೆ ಈಗಾಗಲೇ ಮಾನ್ಯ ನ್ಯಾಯಾಲಯದ ಆದೇಶವನ್ನು ತಂದಿದ್ದರೂ, ಅದನ್ನು ತಮಗೆ / ಇತರರಿಗೆ ತಿಳಿಸದೇ ಇರುವುದು ದುರುದ್ದೇಶಪೂರ್ವಕವಾಗಿದ್ದು, ತಮ್ಮೆಲ್ಲರನ್ನು ನ್ಯಾಯಾಂಗ ನಿಂದನೆಯ ಸಂಕಷ್ಟಕ್ಕೆ ಸಿಲುಕಿಸುವ ಹುನ್ನಾರವಾಗಿದೆ.

೩. ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ, ಗೌರವ, ಪ್ರತಿಷ್ಠೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಯಾವುದೇ

೩ನೇ ಪುಟಕ್ಕೆ....

**ರೀತಿಯಿಂದಲೂ ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ, ಗೌರವ, ಪ್ರತಿಷ್ಠೆಗಳಿಗೆ ವಿರುದ್ಧವಾಗಿ ನ್ಯಾಯಾಂಗ ನಿಂದನೆ ಮಾಡುವುದಿಲ್ಲ ಎಂಬ ನಂಬಿಕೆಯನ್ನು ಇಟ್ಟು, ತಾವು ಕನ್ನಡದ ವಿರೋಧಿಗಳಾಗದೇ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಇರುತ್ತೀರಿ ಎಂಬ ವಿಶ್ವಾಸವನ್ನು ತಮ್ಮ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು ಯಾವಾಗಲೂ ಹೊಂದಿರುತ್ತದೆ.**

೪. ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಪ್ರತಿವಾದಿಗಳ ಪ್ರತಿನಿಧಿಗಳು, ಪ್ರತಿವಾದಿಗಳ ನಿರೂಪಕರು, ಪ್ರತಿವಾದಿಗಳ ಸುದ್ದಿಗಳ ಓದುಗರು, ಪ್ರತಿವಾದಿಗಳ ವರದಿಗಾರರು, ಪ್ರತಿವಾದಿಗಳ ಪ್ರತಿನಿಧಿಗಳು, ಪ್ರತಿವಾದಿಗಳ ಅನುಯಾಯಿಗಳು, ಪ್ರತಿವಾದಿಗಳ ಸಹವರ್ತಿಗಳು ಎಂದು ಉಲ್ಲೇಖಿಸಿರುವುದು, **ಈ ಮೊಕದ್ದಮೆಯಲ್ಲಿ ಪ್ರತಿವಾದಿಗಳ ಪರವಾಗಿರುವವರು** ಎಂದು ಅರ್ಥ ಮಾಡಿಕೊಳ್ಳಬೇಕಾಗಿ ವಿನಂತಿ.

೫. **ಯಾವುದೇ ಪ್ರತಿಷ್ಠಿತ ಮತ್ತು ಜನಪ್ರಿಯ ದಿನಪತ್ರಿಕೆಗಳ ಹಾಗೂ ವಿದ್ಯುನ್ಮಾನ / ಸಾಮಾಜಿಕ ಜಾಲತಾಣ ಮಾಧ್ಯಮದ ಮುದ್ರಕರು, ಸಂಪಾದಕರು, ಉಪ ಸಂಪಾದಕರು, ಮುಖ್ಯ ವರದಿಗಾರರು, ವರದಿಗಾರರು, ಮುಂತಾದವರಲ್ಲಿ ಯಾರನ್ನೂ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಈ ಮೊಕದ್ದಮೆಯಲ್ಲಿ, ಪ್ರತಿವಾದಿಗಳನ್ನಾಗಿ ಮಾಡಿರುವುದಿಲ್ಲ ಹಾಗೂ ಮೇಲೆ ಹೇಳಿದವರು ಯಾರೂ ಪ್ರತಿವಾದಿಗಳಾಗಿರುವುದಿಲ್ಲ.** ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯಿಂದ ಮಾನ್ಯತೆ ಹೊಂದಿದ, ದೂರದರ್ಶನ ಮಾಧ್ಯಮದಲ್ಲಿ ಅತ್ಯಂತ ಹಿರಿಯ ಸ್ಥಾನದಲ್ಲಿ ಸೇವೆ ಸಲ್ಲಿಸಿದ, ಮಾಧ್ಯಮದ ಹಿನ್ನೆಲೆಯನ್ನು ಹೊಂದಿರುವ ಮೊದಲನೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ನಾಡೋಜ ಡಾ. ಮಹೇಶ ಜೋಶಿ** ಅವರು **ಪ್ರಜಾಪ್ರಭುತ್ವದ ನಾಲ್ಕನೆ ಅಂಗವಾಗಿ ಪ್ರತಿನಿಧಿಸುವ "ಮಾಧ್ಯಮದ ಮೇಲೆ ಅತ್ಯಂತ ಹೆಚ್ಚಿನ ಗೌರವವನ್ನು ಹೊಂದಿರುತ್ತಾರೆ"** ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.

೬. ಜೊತೆಗೆ, ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿ ಎಂದು ಸಮಾನ ಮನಸ್ಕರ ವೇದಿಕೆಯು ಹೊರಡಿಸಿರುವ ಪ್ರಕಟಣೆಯಲ್ಲಿ, **ಶ್ರೀ ಎಂ.ಕೆ. ರಂಗಪ್ಪ, ಕನ್ನಡ ಜನಶಕ್ತಿ ಕೇಂದ್ರದ ಪದಾಧಿಕಾರಿಗಳು** ಎಂದು ಹೆಸರು ನಮೂದಿಸಿರುವುದಕ್ಕೆ ಸಂಬಂಧಿಸಿದಂತೆ, ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಪತ್ರ ಬರೆದು, ಸಮಾನ ಮನಸ್ಕರ ವೇದಿಕೆಯು ಹೊರಡಿಸಿರುವ ಪ್ರತಿಭಟನೆಯ ಪ್ರಕಟಣೆಯಲ್ಲಿ ಅದರ ಸಂಚಾಲಕರಾದ ಸಿ.ಕೆ. ರಾಮೇಗೌಡ, ಶಂಕರ ಹೂಗಾರ ಅವರುಗಳು **ಅವರ ಅನುಮತಿ ಕೇಳದೇ ಹಾಗೂ ಅವರು ಅನುಮತಿ ನೀಡದೇ ಇದ್ದಾಗಲೂ, ಅವರ ಹೆಸರನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಮತ್ತು ಈ ಪ್ರತಿಭಟನೆಗೂ ಹಾಗೂ ಅವರಿಗೂ ಯಾವುದೇ ಸಂಬಂಧವಿರುವುದಿಲ್ಲ ಹಾಗೂ ಪ್ರತಿಭಟನೆಯಲ್ಲಿ ಅವರು ಭಾಗವಹಿಸುವುದಿಲ್ಲ** ಎಂದು ಪತ್ರದಲ್ಲಿ ಸ್ಪಷ್ಟವಾಗಿ ಬರೆದಿರುವ ಹಿನ್ನೆಲೆಯಲ್ಲಿ, **ಸಮಾನ ಮನಸ್ಕರ ವೇದಿಕೆಯವರು, ಅದರಲ್ಲೂ ಸಂಚಾಲಕರಾದ ಸಿ.ಕೆ. ರಾಮೇಗೌಡ, ಶಂಕರ ಹೂಗಾರ ಅವರು, ಕೆಲವು ಪ್ರಮುಖ ಹೋರಾಟಗಾರರ, ಸಾಹಿತಿಗಳ**

**೪ನೇ ಪುಟಕ್ಕೆ....**

ಮತ್ತು ಸಂಸ್ಥೆಗಳ ಹೆಸರನ್ನು ಪ್ರಕಟಿಸಿ, ತಮ್ಮೆಲ್ಲರನ್ನು ದಾರಿ ತಪ್ಪಿಸಿ, ಅವರ ಹೆಸರುಗಳನ್ನು ದುರುಪಯೋಗಪಡಿಸಿಕೊಂಡು ನಂಬಿಕೆ ದ್ರೋಹ ಮಾಡಿರುತ್ತಾರೆ ಹಾಗೂ ಇದರಿಂದ ಅವರುಗಳನ್ನು ವಿನಾಕಾರಣ ನ್ಯಾಯಾಂಗ ನಿಂದನೆಗೆ ಒಳಪಡಿಸುವ ಕುತಂತ್ರ ಮಾಡಿರುವುದು ಸ್ಪಷ್ಟವಾಗಿರುವುದನ್ನು ತಮ್ಮ ಗಮನಕ್ಕೆ ತರಲು ಕನ್ನಡ ಸಾಹಿತ್ಯ ಪರಿಷತ್ತು ಇಚ್ಛಿಸುತ್ತದೆ. ಶ್ರೀ ಎಂ.ಕೆ. ರಂಗಪ್ಪ ಅವರು ಪರಿಷತ್ತಿಗೆ ಬರೆದ ಪತ್ರದ ಪ್ರತಿಯನ್ನು ಇದರೊಂದಿಗೆ ನೀಡಲಾಗಿದೆ.

೭. ಇದೇ ತರಹ ಶ್ರೀ ಕೆ.ಸಿ. ಜಗನ್ನಾಥ ರೆಡ್ಡಿ, ಅಧ್ಯಕ್ಷರು, ದಂಡು ಪ್ರದೇಶ ಕನ್ನಡ ಸಂಘಗಳ ಒಕ್ಕೂಟ ಹಾಗೂ ಶ್ರೀ ಎಂ. ತಿಮ್ಮಯ್ಯ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯ ಕನ್ನಡ ಸಂಘಗಳ ಒಕ್ಕೂಟ, ಅವರುಗಳು ತಮ್ಮ ಹೆಸರುಗಳನ್ನು ಸಮಾನ ಮನಸ್ಕರ ವೇದಿಕೆಯು ದುರುಪಯೋಗ ಪಡಿಸಿಕೊಂಡಿದ್ದು, ಅವರ ಅನುಮತಿ ಕೇಳದೇ ಹಾಗೂ ಅವರು ಸಮಾನ ಮನಸ್ಕರ ವೇದಿಕೆಗೆ ಅವರು ಅನುಮತಿ ನೀಡದೇ ಇದ್ದರೂ, ಅವರ ಹೆಸರನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಮತ್ತು ಈ ಪ್ರತಿಭಟನೆಗೂ ಹಾಗೂ ಅವರಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದು ಶ್ರೀ ಕೆ.ಸಿ. ಜಗನ್ನಾಥ ರೆಡ್ಡಿ ಮತ್ತು ಎಂ. ತಿಮ್ಮಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ತಿಗೆ ದೂರವಾಣಿಯ ಮೂಲಕ ತಿಳಿಸಿರುತ್ತಾರೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೆ ಅಪಾರ ಗೌರವವನ್ನು ಹೊಂದಿದ್ದು, ಅವರು ಪ್ರತಿಭಟನೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪಷ್ಟೀಕರಿಸಿರುತ್ತಾರೆ ಎಂಬ ವಿಚಾರವನ್ನೂ ಸಹ ತಮ್ಮ ಗಮನಕ್ಕೆ ತರಲಾಗುತ್ತಿದೆ.

೮. ಈ ಎಲ್ಲ ವಿಚಾರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾನ್ಯ ನ್ಯಾಯಾಲಯದ ಗಮನಕ್ಕೆ ಮುಂದಿನ ಸುನಾವಣೆಯಲ್ಲಿ ತಂದು ಮುಂದಿನ ಕ್ರಮಕೈಗೊಳ್ಳಲು ಪ್ರಾರ್ಥಿಸುತ್ತದೆ.

**ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರ ಅನುಮೋದನೆಯೊಂದಿಗೆ**

(ಶ್ರೀನಾಥ್ ಜೆ.)
ಮಾಧ್ಯಮ ಸಂಚಾಲಕರು
ಕನ್ನಡ ಸಾಹಿತ್ಯ ಪರಿಷತ್ತು

– ಪ್ರಕಟಣೆಯ ಕೃಪೆಗಾಗಿ

ಮಾನ್ಯ ಸಂಪಾದಕರು

................................ ಪತ್ರಿಕೆ / ಟಿ.ವಿ. ಮಾಧ್ಯಮ

ಬೆಂಗಳೂರು

ಇವರಿಗೆ
ಮಾನ್ಯ ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ
ಬೆಂಗಳೂರು.

ಇಂದ
ಎಂ.ಕೆ. ರಂಗಪ್ಪ
ನಂ.1, 4ನೇ ಕ್ರಾಸ್
ಕಾಳಿದಾಸ ಬಡಾವಣೆ
ಶ್ರೀನಗರ, ಬೆಂಗಳೂರು-50

ಮಾನ್ಯರೇ,

ಇತ್ತೀಚೆಗೆ ಕನ್ನಡ ಜನಶಕ್ತಿ ಕೇಂದ್ರದ ಪದಾಧಿಕಾರಿಗಳ ಹೆಸರಿನಲ್ಲಿ ಪ್ರಕಟಣೆಯೊಂದು whats app ಗುಂಪಿನಲ್ಲಿ ಬಂದಿರುವುದನ್ನು ಗಮನಿಸಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸ್ತುತವನ್ನು ವಿರೋಧಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಮುಂದೆ ಧರಣಿ ಅಥವಾ ಹೋರಾಟವನ್ನು ನಡೆಸುವುದನ್ನು ಕುರಿತಂತೆ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದೆ ಎಂದು ತಿಳಿದು ಬಂದಿದೆ.

ಇದಕ್ಕೆ ಸಂಬಂಧಪಟ್ಟಂತೆ ನಾನು ತಮಗೆ ತಿಳಿಯಪಡಿಸುವುದೇನೆಂದರೆ, ಕನ್ನಡ ಜನಶಕ್ತಿ ಕೇಂದ್ರದ ಪದಾಧಿಕಾರಿಗಳ ಹೆಸರಿನ ಪ್ರಕಟಣೆಯಲ್ಲಿ ಎಂ.ಕೆ. ರಂಗಪ್ಪ ಆದ ನನ್ನ ಹೆಸರು ಹಾಕಿದ್ದು ಇದ್ದು ಈ ಪ್ರಕಟಣೆಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ. ಮತ್ತು ಈ ಪ್ರಕಟಣೆಗೆ ನನಗೆ ಯಾರೂ ಅನುಮತಿ ಕೇಳಿಲ್ಲ ನಾನೂ ಅನುಮತಿ ಕೊಟ್ಟಿಲ್ಲ.

ಆದುದರಿಂದ ಈ ಪ್ರಕಟಣೆಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಮತ್ತೊಮ್ಮೆ ತಮಗೆ ತಿಳಿಸಲಿಚ್ಛಿಸುತ್ತೇನೆ.

ಬೆಂಗಳೂರು
ದಿನಾಂಕ 9-6-2023

ತಮ್ಮ ವಿಶ್ವಾಸಿ.
[signature]
(ಎಂ.ಕೆ.ರಂಗಪ್ಪ)
ಮೊ- 9945003903